

# ಆಲೋಚನೆಗಳು ಮತ್ತು ವಿಚಾರಗಳನ್ನು ನೆಲೆಗೊಳಿಸುವುದು

ಅನಿಲ್ ಅಂಗಡಿಕಿ

ಯಾವುದೇ ಅಭ್ಯಾಸದ ಯಾವುದೇ ಸಂದರ್ಭದಲ್ಲಿ, ಕೆಲಸದ ಸುಧಾರಣೆ, ಬದಲಾವಣೆ ಅಥವಾ ಅದನ್ನು ಬಿಟ್ಟುಬಿಡುವುದರ ಕುರಿತು ನಮಗೆ ಹೊಸ ಆಲೋಚನೆಗಳು ಬರುತ್ತವೆ. ನಾನು ಶಿಕ್ಷಣ ಕ್ಷೇತ್ರವನ್ನು ಕುರಿತು (ಮುಖ್ಯವಾಗಿ ಮುಖ್ಯವಾಹಿನಿಯ ಶಾಲಾ ಶಿಕ್ಷಣ) ನನ್ನ ಅಭಿಪ್ರಾಯಗಳನ್ನು ಕ್ರೋಡೀಕರಿಸಲು ಇಲ್ಲಿ ಪ್ರಯತ್ನಿಸುತ್ತಿದ್ದೇನೆ.

ಮಕ್ಕಳಿಗಾಗಿ ಕಲಿಕಾ ವಾತಾವರಣವನ್ನು ರೂಪಿಸುವುದಕ್ಕಾಗಿ ಈ ವ್ಯವಸ್ಥೆಯಲ್ಲಿ ಒಳಗೊಳ್ಳುವ ಮುಖ್ಯ ಭಾಗೀದಾರರಾಗಿರುವ ಶಿಕ್ಷಕರಿಗೆ ತಮ್ಮಿಂದಲೇ ಅಥವಾ ಅಧಿಕಾರಿಗಳಿಂದ ಈ ಅನುಷ್ಠಾನದ ಉದ್ದೇಶಕ್ಕಾಗಿ ಅನೇಕ ವಿಚಾರಗಳು ಸಿಗುತ್ತವೆ. ಆದರೆ ವೃತ್ತಿಪರರೊಬ್ಬರು ಈ ಆಲೋಚನೆಗಳನ್ನು ಕಾರ್ಯಗತಗೊಳಿಸಲು ಯತ್ನಿಸಿದಾಗ, ಮುಖ್ಯವಾಗಿ ಶಾಲಾ ವ್ಯವಸ್ಥೆಯಲ್ಲಿ ಅವುಗಳನ್ನು ಸಾಂಸ್ಥೀಕರಣಗೊಳಿಸಲು ವ್ಯಕ್ತಿಯೊಬ್ಬರು ಇಚ್ಛೆಸಿದರೆ, ಅವರಿಗೆ ಅನೇಕ ಸವಾಲುಗಳು ಎದುರಾಗುತ್ತವೆ. ನನಗಾದ ಅನುಭವದ ಕೆಲವೊಂದು ಉದಾಹರಣೆಗಳನ್ನು ನಾನಿಲ್ಲಿ ಹಂಚಿಕೊಳ್ಳುತ್ತಿದ್ದೇನೆ.

ಜವಾಬ್ದಾರಿಯ ಜೊತೆಗೆ ಸ್ವಾತಂತ್ರ್ಯದ ಭಾವನೆಯನ್ನು ಶಾಲಾ ವ್ಯವಸ್ಥೆಯೊಳಗೆ ತರುವುದು ಹೇಗೆ ಎಂದು ಯೋಚಿಸುತ್ತಿದ್ದಾಗ ನಾನೂ ಸಹ ಗೊಂದಲಕ್ಕೆ ಒಳಗಾಗಿದ್ದೆ. ನಮ್ಮ ಸಂಸ್ಥೆಯು (ನಾನು ಕೆಲಸ ಮಾಡುತ್ತಿರುವ ಸ್ಥಳ), ಯಾವುದೇ ವಿಷಯವನ್ನು ಕುರಿತು ತಾರ್ಕಿಕ ಚಿಂತನೆಯನ್ನು ಬೆಳೆಸಲು ಕಾರಣವಾಗುವ ಪ್ರಶ್ನೆಗಳನ್ನು ಮುಂದಿರಿಸಲು/ ಕೇಳಲು ಸ್ವಾತಂತ್ರ್ಯವನ್ನು ನೀಡುವ ನೈಜ ಸಂಬಂಧವನ್ನು ಮಕ್ಕಳು ಮತ್ತು ಶಿಕ್ಷಕರ ನಡುವೆ ಸ್ಥಾಪಿಸುವಲ್ಲಿ ಹೆಚ್ಚು ಪರಿಣಾಮಕಾರಿ ಎನಿಸುವ ಮುಕ್ತ, ಭಯರಹಿತ/ನಿರ್ಭೀತ ಮತ್ತು ನ್ಯಾಯಯುತ ಪರಿಸರವನ್ನು ಮಕ್ಕಳು ಆನಂದಿಸುವ ಸಂಸ್ಕೃತಿಯಲ್ಲಿ ನಂಬಿಕೆಯನ್ನು ಇಟ್ಟಿದೆ. ಈ ಆಲೋಚನೆಯನ್ನು ಕೇಳುವಾಗ ಹಿತವೆನಿಸುತ್ತದೆ. ಆದರೆ ಹಿಂದಿನ ಸಂಸ್ಥೆಗಳಲ್ಲಿ ನಾವು ಗಳಿಸಿದ ಅನುಭವವು ಇದಕ್ಕಿಂತ ಭಿನ್ನವಾಗಿತ್ತು. ನಮ್ಮ ಪ್ರಸ್ತುತ ಶಾಲಾ ಮಕ್ಕಳು ಸಣ್ಣ ಹಳ್ಳಿಯಿಂದ ಬಂದವರಾಗಿದ್ದಾರೆ. ಇವರಲ್ಲಿ ಹೆಚ್ಚಿನ ಮಕ್ಕಳಿಗೆ ಅವರ ಮನೆಯಲ್ಲಿ ಕುತೂಹಲ ಹಾಗೂ ಪ್ರಶ್ನಿಸುವ ಪ್ರವೃತ್ತಿಗೆ ಕಪಾಳಮೋಕ್ಷದ ಮೂಲಕ ಉತ್ತರಿಸಲಾಗುತ್ತದೆ! ಶಾಲೆಯ ಮುಕ್ತ ಹಾಗೂ ಭಯರಹಿತ ವಾತಾವರಣವು ಮಕ್ಕಳಿಗೆ ಶಾಲೆಯಲ್ಲಿ ತಮ್ಮ ಸಮಯವನ್ನು ಆನಂದಿಸಲು ಅವಕಾಶವನ್ನು ಮಾಡಿಕೊಟ್ಟಿದೆ.

ನಮ್ಮ ಸಂಸ್ಥೆಯಲ್ಲಿ ದೊರೆಯುವ ನೆರವಿನ ವ್ಯವಸ್ಥೆಯು ಅದ್ಭುತವಾಗಿದ್ದು, ತರಗತಿಯ ನಿರ್ವಹಣೆ ಮತ್ತು ಸುಗಮಕಾರರಾಗಿ ಶಿಕ್ಷಕರು ತಮ್ಮ ಪಾತ್ರವನ್ನು ನಿಭಾಯಿಸುವಲ್ಲಿ ಎದುರಾಗುವ ಸಮಸ್ಯೆಗಳನ್ನು ಕುರಿತು ಅವರು ನಮ್ಮೊಂದಿಗೆ ನಿರಂತರವಾಗಿ ಸಂವಾದ ನಡೆಸುತ್ತಾರೆ. ಹೀಗಾಗಿ ನೀತಿ ನಿಯಮಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆ ಮುಂತಾದ ವಿಷಯಗಳನ್ನು ಶೋಧಿಸಲು ನಾವು ಆರಂಭಿಸಿದೆವು. ಅಲ್ಲದೆ ವರ್ತನೆಯಲ್ಲಿ ಬದಲಾವಣೆಯನ್ನು ತರುವುದಕ್ಕಾಗಿ ಅವರೊಂದಿಗೆ ನಿರಂತರ ಸಂವಾದವನ್ನು ನಡೆಸಿದೆವು. ಖಂಡಿತವಾಗಿಯೂ, ಈ ವಿಚಾರಗಳು (ಅನೇಕ ಶಾಲೆಗಳಲ್ಲಿ ಈಗಾಗಲೇ ಜಾರಿಯಲ್ಲಿರುವ) ನಮ್ಮ ನಂಬಿಕೆಗಳನ್ನು ದೃಢಪಡಿಸುವಲ್ಲಿ ಯಶಸ್ವಿಯಾದವು. ಆದರೆ ಇದರಿಂದಾಗಿ ಇನ್ನೊಂದು ಸವಾಲು ಎದುರಾಯಿತು: ಮಕ್ಕಳ ಆರೈಕೆದಾರರು ನಮ್ಮನ್ನು ದೂರಲು ಪ್ರಾರಂಭಿಸಿದರು. ಮಕ್ಕಳು ತಪ್ಪು ಮಾಡಿದಾಗ ಯಾವುದೇ ಶಿಸ್ತು ಕ್ರಮವನ್ನು ತೆಗೆದುಕೊಳ್ಳದೆ ಅವರ ಮಕ್ಕಳನ್ನು ನಾವು ಹಾದಿ ತಪ್ಪಿಸುತ್ತಿದ್ದೇವೆ ಎನ್ನುವುದು ಅವರ ದೂರು ಆಗಿತ್ತು. ಏಕೆಂದರೆ ಮುಖ್ಯವಾಗಿ ಮಕ್ಕಳೊಂದಿಗೆ ಉದ್ಭವಿಸುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಬಳಸುವ ಸಂವಾದದ ಭಾಷೆಯನ್ನು ಅರ್ಥಮಾಡಿಕೊಳ್ಳುವುದು ಅವರ ಪಾಲಿಗೆ ಕಷ್ಟದ ವಿಚಾರವಾಗಿತ್ತು.

ಅನೇಕ ಸಂದರ್ಭಗಳಲ್ಲಿ, ಮಕ್ಕಳು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ನಿಭಾಯಿಸುವಲ್ಲಿ ವಿಫಲರಾಗುತ್ತಿರುವುದು ಶಾಲೆಯಲ್ಲಿ ನಮ್ಮ ಗಮನಕ್ಕೆ ಬಂದಿತು. ಆಗ ನಾವು, ಮಕ್ಕಳ ಸಮಿತಿಯನ್ನು ರೂಪಿಸುವ ಸಲುವಾಗಿ ಕೆಲವು ಎರವಲು ಪಡೆದ ವಿಚಾರಗಳನ್ನು ಕಾರ್ಯಗತಗೊಳಿಸಲು ಯೋಚಿಸಿದೆವು. ನಮ್ಮ ಕಳವಳಗಳನ್ನು ಹಂಚಿಕೊಳ್ಳುವ, ಶಿಕ್ಷಕರ ಸಾಪ್ತಾಹಿಕ ಸಭೆಯಲ್ಲಿ ಈ ವಿಚಾರವನ್ನು ಚರ್ಚಿಸಿದ ಅನಂತರ, ನಮ್ಮ ಶಾಲೆಯಲ್ಲಿ ಸಮಿತಿಯನ್ನು ರೂಪಿಸುವ ವಿಚಾರವನ್ನು ಮಕ್ಕಳ ಮುಂದಿಟ್ಟೆವು. ನಾವು ಏನನ್ನು ಹೇಳಲು ಇಚ್ಛೆಸುತ್ತೇವೆ ಎಂಬುದನ್ನು ಅವರಲ್ಲಿ ಕೆಲವರು ಅರ್ಥ ಮಾಡಿಕೊಳ್ಳದೆ ಇದ್ದರೂ, ಅದನ್ನು ಪ್ರಯತ್ನಿಸಲು ಅವರು ಒಪ್ಪಿಕೊಂಡರು. ಏಕೆಂದರೆ ಹೊಸ ವಿಷಯಗಳು ಮಕ್ಕಳ ಆಸಕ್ತಿಯನ್ನು ಕೆರಳಿಸುತ್ತವೆ. ಇಡೀ ಶಾಲೆಯನ್ನು ಸಮಿತಿಗಳಲ್ಲಿ ಒಳಗೊಂಡಿರುವುದು ಉತ್ತಮ ಹೆಜ್ಜೆಯಾಗಿತ್ತು ಎಂದು ನನಗೆ ಅನಿಸುತ್ತದೆ. ಏಕೆಂದರೆ ಶಾಲೆಯ ಪ್ರತಿ ಸದಸ್ಯನು (ಕಿರಿಯನಾಗಿರಲಿ ಅಥವಾ ಹಿರಿಯನಾಗಿರಲಿ) ಕನಿಷ್ಠ ಒಂದು ಸಮಿತಿಯ ಕಾರ್ಯಗಳಲ್ಲಿ ಪಾಲ್ಗೊಳ್ಳಬಹುದು. ಒಟ್ಟು ಎಂಟು ಸಮಿತಿಗಳನ್ನು ರೂಪಿಸಲಾಯಿತು. ಪ್ರತಿ ಸಮಿತಿಯ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಸದಸ್ಯರೇ ನಿಗದಿಪಡಿಸಬೇಕಿತ್ತು. ಯಾವುದಾದರೂ ಒಂದು ಸಮಿತಿಯ ಸದಸ್ಯರಾಗಿದ್ದ ಪ್ರತಿ ಶಿಕ್ಷಕರು ಈ ಸಿದ್ಧಪಡಿಸುವಿಕೆಯಲ್ಲಿ ಸುಗಮಕಾರರಾಗಿ ತಮ್ಮ ಪಾತ್ರವನ್ನು ವಹಿಸಿದರು. ಮೊದಲ ವರ್ಷದಲ್ಲಿ ಇದನ್ನು ಕಾರ್ಯಗತಗೊಳಿಸುವುದಕ್ಕಾಗಿ ಮಕ್ಕಳು ಮತ್ತು ಶಿಕ್ಷಕರಿಬ್ಬರನ್ನು ಒಟ್ಟಿಗೆ ತರುವುದು ತುಂಬ ಕಷ್ಟಕರ ಕೆಲಸವೆನಿಸಿತು. ಏಕೆಂದರೆ ಏನನ್ನು ಮಾಡಬೇಕು ಮತ್ತು ಹೇಗೆ ಮಾಡಬೇಕು ಎನ್ನುವುದನ್ನು ಕುರಿತು ನಮಗೆ ಸ್ಪಷ್ಟತೆ ಇರಲಿಲ್ಲ. ಒಂದು ವಿಚಾರದ ದೊಡ್ಡ ಉದ್ದೇಶವನ್ನು ಮೆಲ್ಲನೆ ಸಾಧಿಸಬೇಕಾದಾಗ, ಇನ್ನೊಂದು ಕಡೆಯಿಂದ ಆ ವಿಚಾರವನ್ನು ತಮಗೆ ಬೇಕಾದಂತೆ ಹೊಂದಿಸಿಕೊಳ್ಳುವುದು ನನ್ನ ಪ್ರಕಾರ ತುಂಬ ಕಷ್ಟದ ಕೆಲಸವಾಗಿತ್ತು. ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಕಾರ್ಯತಂತ್ರಗಳನ್ನು ಚರ್ಚಿಸುವುದಕ್ಕಾಗಿ ಸಮಿತಿಗಳ ನಡುವೆ ಕೆಲವೊಂದು ಸಭೆಗಳನ್ನು ನಡೆಸಲು ಸಲಹೆ ನೀಡಲಾಯಿತು.

ಹೆಚ್ಚಿನ ವಿದ್ಯಾರ್ಥಿಗಳಲ್ಲಿ ಆರಂಭದಲ್ಲಿದ್ದ ಉತ್ಸಾಹವು ಮರೆಯಾಗುತ್ತಾ ಹೋಯಿತು. ಏಕೆಂದರೆ ಈ ವಿಚಾರವು ಅವರಲ್ಲಿ ಕುತೂಹಲವನ್ನುಂಟುಮಾಡಲಿಲ್ಲ ಅಥವಾ ನಿರ್ಣಾಯಕ ಪಾತ್ರವನ್ನು

ವಹಿಸಲು ಅವರಿಗೆ ಅವಕಾಶ ದೊರೆಯಲಿಲ್ಲ. ಸಕ್ರಿಯವಾಗಿ ಪಾಲ್ಗೊಂಡವರು ತಾವಾಗಿಯೇ ಕೆಲಸವನ್ನು ಕೈಗೆತ್ತಿಕೊಂಡರು ಹಾಗೂ ನಿಯತ ಕಾರ್ಯಕ್ರಮವನ್ನು ಪೂರ್ಣಗೊಳಿಸಿದರು. ಜವಾಬ್ದಾರಿಯ ನಿಯೋಜನೆಯ ವಿಚಾರವನ್ನು ಬಿತ್ತುವುದು ತುಂಬ ಕಷ್ಟದ ಕೆಲಸ. ಮೊದಲ ವರ್ಷದಲ್ಲಿ ಮಕ್ಕಳು ಒಂದು ಅಥವಾ ಎರಡು ಸಮಿತಿಗಳಲ್ಲಿ ಪಾಲ್ಗೊಳ್ಳುವಾಗ ಎದುರಾಗುವ ಸವಾಲನ್ನು ಎಲ್ಲರೊಂದಿಗೆ ಚರ್ಚಿಸಲಾಯಿತು. ಪ್ರತಿ ತಿಂಗಳು ಹೊಸ ಸಮಿತಿಗಳಿಗೆ ಸದಸ್ಯರನ್ನು ಸರದಿಯಂತೆ ನಿಯೋಜಿಸುವುದನ್ನು ಜಾರಿಗೊಳಿಸಲಾಯಿತು ಹಾಗೂ ಹಳೆಯ ಪಟ್ಟಿಗೆ ಎರಡು ಹೊಸ ಸಮಿತಿಗಳನ್ನು ಸೇರ್ಪಡೆಗೊಳಿಸಲಾಯಿತು. ಎಲ್ಲ ತರಗತಿಗಳ ಸದಸ್ಯರು ಮತ್ತು ಒಬ್ಬ ಶಿಕ್ಷಕರನ್ನು ಒಳಗೊಂಡಿರುವ ಹತ್ತು ತಂಡಗಳನ್ನು ರಚಿಸಲಾಯಿತು ಹಾಗೂ ಅಸೆಂಬ್ಲಿಯಲ್ಲಿ ಲಾಟರಿ ಎತ್ತುವ ಮೂಲಕ ಒಂದು ಸಮಿತಿಯಲ್ಲಿ ಸೇವೆ ಸಲ್ಲಿಸುವ ಗುಂಪಿನ ಆಯ್ಕೆಯನ್ನು ನಿರ್ಧರಿಸಲಾಯಿತು. ಇದು ಒಂದು ವರ್ಷದಲ್ಲಿ ಪ್ರತಿ ಮಗುವಿಗೆ ಎಲ್ಲ ಸಮಿತಿಗಳಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ನೀಡುತ್ತದೆ.

ಈಗ ನಾವು ಸಮಿತಿಗಳ ತಂಡದ ಸಭೆ, ಜವಾಬ್ದಾರಿಯ ನಿಯೋಜನೆ ಮತ್ತು ಮಕ್ಕಳು ತಮ್ಮ ಪಾತ್ರವನ್ನು ನಿಭಾಯಿಸುವುದನ್ನು ಕುರಿತು ಒಂದಷ್ಟು ನಿರಂತರತೆಯನ್ನು ಸಾಧಿಸಿದೆವು. ಸವಾಲುಗಳನ್ನು ಬಗೆಹರಿಸುವುದಕ್ಕಾಗಿ ಸಮಿತಿಯ ಸದಸ್ಯರೊಂದಿಗೆ ಸಿಬ್ಬಂದಿಯ ನಿರಂತರ ಅನುಸರಣೆ, ಈ ಕುರಿತು ಅಸೆಂಬ್ಲಿಯಲ್ಲಿ ಸದಸ್ಯರ ಪ್ರಸ್ತುತಿ ಇತ್ಯಾದಿಗಳು ರಚನಾತ್ಮಕ ದಿಕ್ಕಿನಲ್ಲಿ ಮುಂದುವರಿಯುವ ಯೋಚನೆಯನ್ನು ಇನ್ನಷ್ಟು ಗಟ್ಟಿಗೊಳಿಸಿದವು. ಈ ರೀತಿ ಸಮಿತಿಗಳ ಕಾರ್ಯನಿರ್ವಹಣೆಯು ಮಧ್ಯಾಹ್ನದ ಬಿಸಿಯೂಟ, ಶಾಲೆಯ ಅಸೆಂಬ್ಲಿ, ಶಾಲೆಯ ಉದ್ಯಾನ ಮತ್ತು ಇದರ ನಿರ್ವಹಣೆ, ಶಾಲೆಯ ಸ್ವಚ್ಛತೆ, ಶಾಲೆಯಲ್ಲಿ ಮತ್ತು ತರಗತಿಯಲ್ಲಿ ಗ್ರಂಥಾಲಯದ ನಿರ್ವಹಣೆ, ಕಾರ್ಯಕ್ರಮಗಳು ಮತ್ತು ಸಂಭ್ರಮಾಚರಣೆಗಳ ವಿನ್ಯಾಸ ಮತ್ತು ನಿರ್ವಹಣೆ, ಇತ್ಯಾದಿ ಹೀಗೆ ಶಾಲಾ ಅಭ್ಯಾಸಗಳಲ್ಲಿ ಎದುರಾಗುವ ದಿನನಿತ್ಯದ ಸವಾಲುಗಳನ್ನು ನಿಭಾಯಿಸುತ್ತಿದೆ. ನಾವು ಸಂಪೂರ್ಣವಾಗಿ ಯಶಸ್ಸನ್ನು ಸಾಧಿಸಿದ್ದೇವೆ ಎಂದು ನಾನು ಹೇಳುತ್ತಿಲ್ಲ. ಆದರೆ ಈ ಯೋಚನೆಯು, ಶಾಲಾ ಕಾರ್ಯಗಳ ನಿರ್ವಹಣೆಯಲ್ಲಿ ಜವಾಬ್ದಾರಿಗಳನ್ನು ಹಂಚಿಕೊಳ್ಳಲು ನಿಧಾನಗತಿಯಲ್ಲಿ ಪ್ರಗತಿ ಸಾಧಿಸುವುದಕ್ಕೆ ತನ್ನ ಕೊಡುಗೆಯನ್ನು ನೀಡುತ್ತಿದೆ. ಪ್ರಗತಿ ಸಾಧನೆಯನ್ನು ಕುರಿತು, ಸದಸ್ಯರ ನಡುವೆ ಚರ್ಚೆ ನಡೆಸಿ ಜವಾಬ್ದಾರಿಗಳನ್ನು ಹಂಚಿಕೊಳ್ಳಲು ಮಕ್ಕಳು ಸಭೆ ನಡೆಸುವುದು, ತಮ್ಮ ಸಮಿತಿಗಳ ನಿಯಮಗಳನ್ನು ಸಿದ್ಧಪಡಿಸುವುದು, ಸಮಸ್ಯೆಗಳನ್ನು ಗುರುತಿಸಿ ಎಲ್ಲರ ಎದುರು ತರುವುದು, ಸರಿಸುಮಾರು ಶಾಲೆಯ ಎಲ್ಲ ಸದಸ್ಯರು ಸರದಿಯ ಆಧಾರದಲ್ಲಿ ಸಮಿತಿಗಳಲ್ಲಿ ಸೇವೆ ಸಲ್ಲಿಸುವ ಮೂಲಕ ಶ್ರೇಣಿ ವ್ಯವಸ್ಥೆಯನ್ನು ತೊಡೆದು ಹಾಕುವುದು, ಶಾಲಾ ಅಭ್ಯಾಸಗಳು ಮತ್ತು ಅವುಗಳ ವಿನ್ಯಾಸಗಳನ್ನು ಕುರಿತು ಮಕ್ಕಳ ಅರಿವು ಮುಂತಾದ ಉದಾಹರಣೆಗಳನ್ನು ನಾವು ಮುಂದಿಡಬಹುದು. ತನ್ನನ್ನು ಕುರಿತು ಹಾಗೂ ಇತರರಿಗಾಗಿ ಜವಾಬ್ದಾರಿಯ ಪ್ರಜ್ಞೆಯನ್ನು ಅನುಸರಿಸುವಲ್ಲಿ, ತಮ್ಮ ಮನೆಯಲ್ಲಿ ಸಂವಾದದ ಪರಿಸರವನ್ನು ರೂಪಿಸುವುದಕ್ಕಾಗಿ ಮಕ್ಕಳ ಪೋಷಕರಲ್ಲಿ ಜಾಗೃತಿ ರೂಪಿಸುವುದು ಇತ್ಯಾದಿ ಇನ್ನೂ ಗಮನ ನೀಡಬೇಕಾದ ಕ್ಷೇತ್ರಗಳಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ.

ಎಳೆಯ ಮಕ್ಕಳೊಂದಿಗೆ ನನಗಾದ ಅನುಭವವನ್ನು ಕುರಿತು ನಾನು ಇನ್ನೊಂದು ಉದಾಹರಣೆಯನ್ನು ಹಂಚಿಕೊಳ್ಳಲು ಬಯಸುತ್ತೇನೆ. ಇದು ನಿರ್ದಿಷ್ಟ ವಿಚಾರ/ ಕಲ್ಪನೆಯನ್ನು ಸಾಧಿಸುವಲ್ಲಿ ನನಗೆ ಸಿಕ್ಕಿದ ಯಶಸ್ಸು ಅಥವಾ ವಿಫಲತೆಗೆ ಸಂಬಂಧಿಸಿದೆ (ಈ ಕುರಿತು ನಾನು ಹಿಂದೆ ಪ್ರಯೋಗ ಮಾಡಿರಲಿಲ್ಲ.). ಕಳೆದ ಎರಡು ಅಥವಾ ಮೂರು ವರ್ಷಗಳಿಂದ ನಾವು ಮಕ್ಕಳನ್ನು ಗ್ರಂಥಾಲಯಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆ. ಹಾಗಾಗಿ ನಮ್ಮ ತಂಡದಲ್ಲಿ ಈ ಕುರಿತು ಕೆಲವೊಂದು ಚರ್ಚೆಗಳೂ ನಡೆದಿವೆ.

ಮಕ್ಕಳಲ್ಲಿ ಸುದ್ದಿಪತ್ರಿಕೆ ಅಥವಾ ನಿಯತಕಾಲಿಕೆಗಳನ್ನು ಓದುವ ಅಭ್ಯಾಸವನ್ನು ನಿಖರವಾಗಿ ಹೇಗೆ ಅಭಿವೃದ್ಧಿಪಡಿಸಬಹುದು ಎಂದು ನಾನು ಯೋಚಿಸುತ್ತಿದ್ದೆ. ಇದಕ್ಕಾಗಿ, ನಾಲ್ಕನೇ ತರಗತಿಯ ಮಕ್ಕಳಿಗೆ ನಾನು ನಮ್ಮ ದಿನಪತ್ರಿಕೆಗಳ ಕೆಲವೊಂದು ಆಸಕ್ತಿಕರ ಸುದ್ದಿಗಳನ್ನು ಪರಿಚಯಿಸಲು ಹೇಳಿದೆ. ಹಂಚಿಕೊಂಡ ಸುದ್ದಿಗಳ ಪೈಕಿ ಅಪಘಾತ ಮತ್ತು ಅನಾಹುತಗಳ ವರದಿಗಳನ್ನು ಕೇಳಲು ಮಕ್ಕಳು ಹೆಚ್ಚು ಉತ್ಸುಕರಾಗಿದ್ದರು. ನಾನು ಈ ವಿಷಯವನ್ನು ಭಾಷಾ ಶಿಕ್ಷಕರ ಜೊತೆ ಚರ್ಚಿಸಿದೆ. ಅವರು ಸುದ್ದಿಪತ್ರಿಕೆಗಳಲ್ಲಿ ಮುದ್ರಿಸಿರುವ ಕೆಲವೊಂದು ಉದ್ಧರಣಗಳನ್ನು ಬರೆದು ಅದನ್ನು ತರಗತಿಯಲ್ಲಿ ಪ್ರದರ್ಶಿಸುವ ಅಭ್ಯಾಸವನ್ನು ಮಕ್ಕಳಿಗೆ ಪರಿಚಯಿಸಿದರು. ಎಲ್ಲರನ್ನು ಒಳಗೊಳ್ಳುವುದಕ್ಕಾಗಿ ಇದನ್ನು ಸರದಿಯ ಸಾಲಿನಲ್ಲಿ ಮಾಡಲಾಯಿತು ಹಾಗೂ ತರಗತಿಯಲ್ಲಿ ಪ್ರಶ್ನಿಸಿದ ಉದ್ಧರಣದ ಮೇಲೆ ಸ್ವಲ್ಪ ಚರ್ಚೆಯನ್ನೂ ಮಾಡಲಾಯಿತು. ಆರಂಭದಲ್ಲಿ ಮಕ್ಕಳು ಇವುಗಳನ್ನು ಬರೆಯಲು ಆಸಕ್ತಿ ತೋರಿದರು. ಆದರೆ ಕಾಲ ಕಳೆದಂತೆ ಈ ಅಭ್ಯಾಸ ಕಳೆಗುಂದಿತು. ಬಹುಶಃ ಕೆಲ ಮಕ್ಕಳು ಎದುರಿಸಿದ ಭಾಷಾ ಓದುವಿಕೆ ಮತ್ತು ಬರೆಯುವಿಕೆ ಸಮಸ್ಯೆಯ ಕಾರಣ ಅಥವಾ ಪ್ರದರ್ಶಿಸಿದ ಅನಂತರ ಚಟುವಟಿಕೆಯ ಅನುಸರಣೆ ಮಾಡದೆ ಇರುವ ಕಾರಣ ಈ ಸಮಸ್ಯೆ ಉಂಟಾಗಿರಬೇಕು. ಹೀಗಾಗಿ, ಸುದ್ದಿಪತ್ರಿಕೆಯ ಪರಿಕಲ್ಪನೆಯನ್ನು ಪರಿಚಯಿಸಲು ಬೇರೆ ಏನಾದರೂ ಮಾಡಬೇಕು ಎಂದು ನಾನು ಭಾವಿಸಿದೆ. ಪತ್ರಿಕೆಗಳನ್ನು ನೋಡಿ ಅವರು ಓದಿದ ಸುದ್ದಿಯನ್ನು ಹಂಚಿಕೊಳ್ಳಲು ಮಕ್ಕಳಿಗೆ ಹೇಳಿದಾಗ ಹೆಚ್ಚಿನ ಸಂದರ್ಭದಲ್ಲಿ ಇದು ಕೈಗೂಡಲಿಲ್ಲ. ಏಕೆಂದರೆ ಅವರು ಅರ್ಥ ಮಾಡಿಕೊಳ್ಳುವ ಅಥವಾ ಅವರಲ್ಲಿ ಆಸಕ್ತಿ ಕೆರಳಿಸುವ ಸುದ್ದಿಯನ್ನು ಗುರುತಿಸಲು ಅವರಿಗೆ ಸಾಧ್ಯವಾಗಲಿಲ್ಲ. ಇದು ನಮ್ಮದೇ ಶಾಲೆಯ ಸುದ್ದಿಪತ್ರಿಕೆಯನ್ನು ಹೊರತರುವ ಕಲ್ಪನೆಯನ್ನು ಹುಟ್ಟುಹಾಕಿತು. ಇಲ್ಲಿ ನಮ್ಮ ಶಾಲೆಯ ಸನ್ನಿವೇಶಕ್ಕೆ ತಕ್ಕುದಾಗಿ ಮಕ್ಕಳು ಸುದ್ದಿಯನ್ನು ಬರೆಯಬಹುದಾಗಿತ್ತು. ಆದರೆ ಈ ಪರಿಕಲ್ಪನೆಯನ್ನು ಮಕ್ಕಳಿಗೆ ಅರ್ಥ ಮಾಡಿಕೊಡುವುದು ನನ್ನ ಪಾಲಿಗೆ ಕಷ್ಟದ ಕೆಲಸವಾಗಿತ್ತು. ಮಿಶ್ರ ಕಲಿಕೆಯ ಮಟ್ಟದ ವಿದ್ಯಾರ್ಥಿಗಳ ಸಣ್ಣ ಗುಂಪಿನ ಮೂಲಕ ಪತ್ರಿಕೆಯನ್ನು ಪ್ರಾರಂಭಿಸುವ ನನ್ನ ಯತ್ನವು ನನ್ನ ನಿರೀಕ್ಷೆಯಂತೆ ನಡೆಯಲಿಲ್ಲ. ಏಕೆಂದರೆ ನನ್ನ ಆಲೋಚನೆಗಳನ್ನು ಅರಿತುಕೊಳ್ಳುವಲ್ಲಿ ವಿದ್ಯಾರ್ಥಿಗಳು ವಿಫಲರಾಗಿದ್ದರು. ನಾನು ಏನನ್ನು ಊಹಿಸುತ್ತೇನೆಯೋ ಅದನ್ನು ಗ್ರಹಿಸಲು ಮಕ್ಕಳು ತುಂಬಾ ಚಿಕ್ಕವರಿದ್ದರು ಎಂದು ಭಾವಿಸಿ ಈ ವಿಚಾರವನ್ನು ಕೈ ಬಿಟ್ಟೆ.

ಈ ವರ್ಷದಲ್ಲಿ ಐದನೇ ತರಗತಿಗೆ ತಲಪಿರುವ ಅದೇ ಮಕ್ಕಳಿಗೆ ಗ್ರಂಥಾಲಯದ ತರಗತಿಯನ್ನು ತೆಗೆದುಕೊಳ್ಳಲು ನನಗೆ ಅವಕಾಶ ಸಿಕ್ಕಿತು. ಮಕ್ಕಳಿಗೆ ಮತ್ತೆ ಸುದ್ದಿಪತ್ರಿಕೆಗಳನ್ನು ಓದುವ ಅಭ್ಯಾಸಕ್ಕೆ ಪರಿಚಯಿಸುವ ಯೋಚನೆ ನನ್ನ ಮನಸ್ಸಿಗೆ ಬಂತು. ಇದಕ್ಕಾಗಿ ನಾನು ಎರಡು ತಿಂಗಳುಗಳ ಕಾಲ ಕೆಲವೊಂದು ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಿದೆ. ಇದರಲ್ಲಿ ದಿನಪತ್ರಿಕೆಗಳಿಂದ ಸುದ್ದಿಗಳನ್ನು ಆರಿಸುವುದು, ಅವುಗಳನ್ನು ಓದುವುದು, ಕೆಲವೊಂದು ಸುದ್ದಿಗಳನ್ನು ಕುರಿತು ಚರ್ಚೆ ನಡೆಸುವುದು, ಸುದ್ದಿ ಅಲ್ಲದೆ ಬೇರೆ ವಿಷಯಗಳನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸುವುದು, ಮಕ್ಕಳ ಸಣ್ಣ ಗುಂಪನ್ನು ರಚಿಸುವುದು ಮತ್ತು ಹಳೆಯ ಪತ್ರಿಕೆಗಳಿಂದ ಆಸಕ್ತಿದಾಯಕ ಮತ್ತು

ವೈವಿಧ್ಯಮಯ ಸುದ್ದಿಗಳನ್ನು ಕತ್ತರಿಸುವುದು, ಈ ತುಣುಕುಗಳಿಂದ ಒಂದೇ ಸುದ್ದಿಪತ್ರಿಕೆಯನ್ನು ರಚಿಸುವುದು ಮತ್ತು ಅದನ್ನು ಪ್ರದರ್ಶಿಸುವುದು ಇತ್ಯಾದಿ ಚಟುವಟಿಕೆಗಳು ಒಳಗೊಂಡಿದ್ದವು. ನಿಧಾನವಾಗಿ, 'ನಾವು ಶಾಲೆಯ ಸುದ್ದಿಪತ್ರಿಕೆಯನ್ನು ಹೊರ ತರಬಹುದೇ' ಎಂಬ ಪ್ರಶ್ನೆಯನ್ನು ಮುಂದಿಟ್ಟೆ. ಈ ಹಿಂದೆ ಯಾವ ಮಕ್ಕಳಿಗೆ ನನ್ನ ವಿಚಾರವನ್ನು ಮನವರಿಕೆ ಮಾಡಿಕೊಡಲು ನಾನು ವಿಫಲನಾಗಿದ್ದೇನೋ, ಆ ಮಕ್ಕಳ ಮುಖದಲ್ಲಿ ನನಗೆ ಈ ಬಾರಿ ಗೊಂದಲ ಕಂಡುಬರಲಿಲ್ಲ. ಅವರು ಸಂತೋಷದಿಂದಲೇ ಒಪ್ಪಿಕೊಂಡರು ಹಾಗೂ ನಾವು ಐದು ತಂಡಗಳನ್ನು ರಚಿಸಿದೆವು. ಈ ಯೋಜನೆಗೆ ಸಂಬಂಧಿಸಿದಂತೆ ನಾವು ಪಡಬೇಕಾದ ಶ್ರಮದ ಗುಣಲಕ್ಷಣ ಮತ್ತು ಪ್ರಕಾರವನ್ನು ಕುರಿತು ಯೋಚಿಸಲು ಪ್ರಾರಂಭಿಸಿದೆವು. ಚರ್ಚೆಯ ವೇಳೆ ನಾನು ದಿನಪತ್ರಿಕೆಯ ಯೋಚನೆಯನ್ನು ಸಾಪ್ತಾಹಿಕಕ್ಕೆ ಬದಲಾಯಿಸಿದೆ. ಏಕೆಂದರೆ ಪ್ರತಿ ದಿನವೂ ನಮ್ಮ ಶಾಲೆಯಲ್ಲಿ ಸುದ್ದಿಯನ್ನು ಪಡೆಯುವುದು ಕಷ್ಟದ ಕೆಲಸ. ಹೀಗಾಗಿ ಮೊದಲ ತಂಡವು ಸುದ್ದಿ ಮತ್ತು ಎಲ್ಲ ತರಗತಿಗಳ ಮಕ್ಕಳಿಂದ ಕವಿತೆಗಳು/ ಕಥೆಗಳು ಇತ್ಯಾದಿ ಬರಹಗಳು ಹಾಗೂ ಚಿತ್ರಕಲೆಗಳನ್ನು ಸಂಗ್ರಹಿಸುವ ಕೆಲಸಕ್ಕೆ ಕೈಹಾಕಿತು. ಈ ಉಪಕ್ರಮವು ಅರ್ಧದಲ್ಲೇ ನಿಲ್ಲಬಾರದು ಎಂಬುದಾಗಿ ನಾನು ಆರಂಭದಿಂದಲೇ ಎಚ್ಚರಿಕೆ ವಹಿಸಿದ್ದೆ ಹಾಗೂ ತಂಡದೊಂದಿಗೆ ಪ್ರತಿ ದಿನವೂ ಅನುಸರಣೆಯನ್ನು ಮಾಡುವ ಜೊತೆಗೆ ಅವರನ್ನು ಉತ್ತೇಜಿಸುವ ಕೆಲಸವನ್ನೂ ಮಾಡಿದೆ. ಅಂತಿಮವಾಗಿ ನನಗೆ ಮತ್ತು ನನ್ನ ತಂಡದ ಪಾಲಿಗೆ ಸಂತಸದ ಕ್ಷಣಗಳು ಎದುರಾದವು. ಮಕ್ಕಳು ಸಲಹೆ ನೀಡಿದಂತೆಯೇ 'ಶಾಲಾ ವಾರಪತ್ರಿಕೆ' ಎಂಬ ಹೆಸರಿನ ಮುಖಾಂತರ ನಮ್ಮ ಶಾಲೆಯಲ್ಲಿ ಮೊದಲ ಸಾಪ್ತಾಹಿಕವನ್ನು (ಶಾಲಾ ವಾರಪತ್ರಿಕೆ) ಹೊರತರುವಲ್ಲಿ ನಾವು ಯಶಸ್ವಿಯಾದೆವು.

ನಾನು ಯಶಸ್ಸನ್ನು ಸಾಧಿಸಿದೆ ಎಂದು ನಾನಿಲ್ಲಿ ಹೇಳಿಕೊಳ್ಳುವುದಿಲ್ಲ. ಏಕೆಂದರೆ ಪತ್ರಿಕೆಯ ಹೆಚ್ಚಿನ ಭಾಗವನ್ನು ಚಿತ್ರಕಲೆಗಳು, ಕವಿತೆಗಳು ಮತ್ತು ಕಥೆಗಳು ಆವರಿಸಿದ್ದವು ಹಾಗೂ ಮೂಲೆಯಲ್ಲಿ ಒಂದಷ್ಟು ಸ್ಥಳವನ್ನು ಸುದ್ದಿಗಳಿಗೆ ನೀಡಲಾಗಿತ್ತು. ಮಕ್ಕಳು ನಿಧಾನವಾಗಿ ವಿಚಾರಗಳನ್ನು ಗ್ರಹಿಸಬಲ್ಲರು ಎನ್ನುವ ವಿಶ್ವಾಸವನ್ನು ಈ ಉಪಕ್ರಮವು ನಮಗೆ ನೀಡಿದೆ. ಎಲ್ಲ ತಂಡಗಳು ಸಾಪ್ತಾಹಿಕವನ್ನು ನಿರಂತರವಾಗಿ ಹೊರ ತಂದವು ಹಾಗೂ ಇಡೀ ಶಾಲಾ ಅಸೆಂಬ್ಲಿಯಲ್ಲಿ ಬಿಡುಗಡೆ ಮಾಡುವ ಅವಕಾಶ ಅವರಿಗೆ ದೊರೆಯಿತು. ಈಗ ಇತರ ತರಗತಿಗಳ ಮಕ್ಕಳು ಸಹ ಶಾಲೆಯ ಸಾಪ್ತಾಹಿಕವನ್ನು ಪ್ರಕಟಿಸಲು ತಮಗೆ ಅವಕಾಶ ನೀಡಬೇಕೆಂದು ಕೇಳಲು ಪ್ರಾರಂಭಿಸಿದರು. ನಾನು ಸಂತೋಷದಿಂದಲೇ ಒಪ್ಪಿಕೊಂಡೆ. ಈಗ ಆರನೇ ತರಗತಿಯ ಮಕ್ಕಳು ಈ ಸಾಪ್ತಾಹಿಕವನ್ನು ಹೊರತರಲು (ಹೆಚ್ಚು ಸುದ್ದಿಗಳೊಂದಿಗೆ ಹಾಗೂ ಇತರ ಸಿಬ್ಬಂದಿಗಳ ಪಾಲ್ಗೊಳ್ಳುವಿಕೆಯೊಂದಿಗೆ) ಪ್ರಾರಂಭಿಸಿದರು. ಮೆಲ್ಲನೆ ಈ ಸುದ್ದಿಪತ್ರಿಕೆಯ ಕಲ್ಪನೆಯು ಸಂಸ್ಥೆಯೊಂದಿಗೆ ಏಕೀಕರಣಗೊಳ್ಳುತ್ತಿದೆ ಎನ್ನುವ ವಿಚಾರವು ವೈಯಕ್ತಿಕವಾಗಿ ನನಗೆ ತುಂಬ ಸಂತಸ ನೀಡಿದೆ. ಪತ್ರಿಕೆಯನ್ನು ಮೊದಲಿಗೆ ಹೊರತಂದ ಪ್ರವರ್ತಕ ಗುಂಪಿನ ವಿದ್ಯಾರ್ಥಿಗಳು ಈ ಸಾಪ್ತಾಹಿಕದಲ್ಲಿ ತಮ್ಮ ಪ್ರಸ್ತುತ ಪಾತ್ರವೇನು ಎಂಬುದಾಗಿ ಕೇಳಲು ಆರಂಭಿಸಿದರು. ಹೆಚ್ಚಿನ ಸುದ್ದಿಗಳು/ ಲೇಖನಗಳನ್ನು ನೀಡುವ ಕೆಲಸದಲ್ಲಿ ತೊಡಗಿಸಿಕೊಂಡಿರುವವರಿಗೆ ನೆರವು ನೀಡಲು ನಾನು ಸಲಹೆ ನೀಡಿದೆ. ಆದರೆ ಆ ಸಂತಸವು ಕಾಣೆಯಾಗಿತ್ತು. ಮಕ್ಕಳನ್ನು ಸುದ್ದಿ ಪತ್ರಿಕೆಯತ್ತ ಸೆಳೆಯುವ ನನ್ನ ಮೂಲ ಕಲ್ಪನೆಯ ಕುರಿತು ನಾನು ಇನ್ನಷ್ಟು ಕೆಲಸ ಮಾಡಬೇಕಿತ್ತು. ಏಕೆಂದರೆ, ನಾನು ಯಾವ ವಿದ್ಯಾರ್ಥಿಗಳೊಂದಿಗೆ ಕೆಲಸ ಮಾಡಿದ್ದೆನೋ, ಅವರಲ್ಲಿ ಹೆಚ್ಚಿನವರು ಓದುವ ಕೆಲಸದಿಂದ ದೂರವೇ ಉಳಿಯುತ್ತಿದ್ದರು. ನನ್ನ ಪ್ರಯತ್ನವು ಜಾರಿಯಲ್ಲಿದ್ದು ಇನ್ನೂ ಕೆಲವು ಚಟುವಟಿಕೆಗಳಿಗಾಗಿ ಯೋಜನೆ ರೂಪಿಸಲಾಗಿದೆ.

ಅನೇಕ ಕಾರಣಗಳಿಗಾಗಿ ನನ್ನ ಅಥವಾ ಇತರರ ಕಲ್ಪನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಭಾಗಶಃ ಯಶಸ್ಸು ಅಥವಾ ವಿಫಲತೆಯನ್ನು ಪಡೆದ ಅನೇಕ ಅನುಭವಗಳು ನನ್ನ ಬಳಿ ಇವೆ. ಇದು ಈ ಕೆಳಗಿನ ಕಾರಣಗಳಿಂದಾಗಿ ಆಗಿರಬಹುದು ಎಂದು ನನಗೆ ಅನಿಸುತ್ತದೆ:

*ವೃತ್ತಿಪರರಿಗೆ ತಾರ್ಕಿಕತೆಯ ಸ್ಪಷ್ಟ ಅರಿವು ಇಲ್ಲದೆ ಇದ್ದರೆ/ ನಿರಂತರ ಅನುಸರಣೆಯೊಂದಿಗೆ ಸಂಬಂಧಿತ ಭಾಗೀದಾರಿಗಳೊಂದಿಗೆ ಸಂವಾದವು ನಡೆಯದೆ ಇದ್ದರೆ.*

*ಸಂದರ್ಭೋಚಿತಗೊಳಿಸುವಿಕೆ ನಡೆಯದೆ ಇದ್ದರೆ, ವಿಚಾರದಲ್ಲಿ ಕಟ್ಟುನಿಟ್ಟಿನೊಂದಿಗೆ (ಬದಲಾವಣೆಗೆ ಕಡಮೆ ಅವಕಾಶ) ಅಧಿಕ ನಿರೀಕ್ಷೆಯನ್ನು ಹೊಂದಿದ್ದಾಗ ಅಥವಾ ವಿಚಾರವನ್ನು ಕುರಿತು ಮುಕ್ತತೆಯನ್ನು ಹೊಂದಿದ್ದರೂ ಸ್ವಂತಿಕೆಯನ್ನು ಕಳೆದುಕೊಳ್ಳದೆ ಇರುವುದು.*

*ಒಂದು ಯೋಚನೆಯ ಮೇಲೆ ವ್ಯಕ್ತಿಯು ಮಾಲೀಕತ್ವವನ್ನು ಸಾಧಿಸಲು ಯತ್ನಿಸಿದರೆ ಅದನ್ನು ನೆಲೆಗೊಳಿಸಲು ಸಾಧ್ಯವಿಲ್ಲ.*

*ಸವಾಲನ್ನು ನಾವು ಅರಿತುಕೊಳ್ಳುವ ಹೊರತು ಅಥವಾ ನಮ್ಮ ಅಭ್ಯಾಸದಲ್ಲಿ ಆ ಸವಾಲು (ಇತರರು ಎದುರಿಸಿದ) ಬರದೆ ಇದ್ದರೆ ನಾವು ಅದನ್ನು ಗಂಭೀರವಾಗಿ ಸ್ವೀಕರಿಸುವುದಿಲ್ಲ.*

*ವಿಷಯವನ್ನು ಕುರಿತು ಹಾಗೂ ಅದನ್ನು ಜಾರಿಗೊಳಿಸುವ ಮೊದಲು, ಜಾರಿಗೊಳಿಸುವ ವೇಳೆ ಮತ್ತು ಅನಂತರ ಉಂಟಾಗಬಹುದಾದ ಪರಿಣಾಮಗಳನ್ನು ಕುರಿತ ಸ್ಪಷ್ಟತೆ ಅಗತ್ಯ.*

ಶಿಕ್ಷಣ ಕ್ಷೇತ್ರದಲ್ಲಿ ಒಬ್ಬ ಸುಗಮಕಾರನಾಗಿ ಸೇವೆ ಸಲ್ಲಿಸುವ ಶಿಕ್ಷಕರ ಅಭ್ಯಾಸವು ಯಾವಾಗಲೂ ಸಾಕಷ್ಟು ಪ್ರಯೋಗಗಳಿಗೆ ಒಳಪಡುತ್ತದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಂತಹ ಮಾರ್ಗದರ್ಶಿ ದಾಖಲೆಗಳಲ್ಲಿ ಮುದ್ರಿತವಾಗಿರುವ ಕಲ್ಪನೆಗಳು, ಶಿಕ್ಷಣ ತಜ್ಞರು ಪ್ರತಿಪಾದಿಸಿರುವ ಮಕ್ಕಳ ಕಲಿಕಾ ಸಿದ್ಧಾಂತಗಳು ಅಥವಾ ನಿರ್ದಿಷ್ಟ ಶಾಲೆಯ ಕಲ್ಪನೆಗಳಾಗಿರಲಿ, ಎಲ್ಲವುಗಳ ಜೊತೆ ಅವರು ಹೆಣಗಾಡಬೇಕು. ಇವುಗಳನ್ನು ನೆಲೆಗೊಳಿಸುವ ಪ್ರಕ್ರಿಯೆಯಲ್ಲಿ ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು ಮತ್ತು ಸ್ವಂತ ಚಿಂತನೆಗಳನ್ನು ಸೇರಿಸಿ ಕಲಿಕೆಯಲ್ಲಿ ವೃದ್ಧಿಯಾಗುವಂತೆ ನೋಡಿಕೊಳ್ಳಬೇಕು. ಒಬ್ಬ ವೃತ್ತಿಪರನಾಗಿ ಪರ್ಯಾಲೋಚನೆಯ ಡೈರಿಯಲ್ಲಿ ಅವುಗಳನ್ನು ದಾಖಲಿಸಿದರೆ ಅವು ನಮ್ಮ ಶಿಕ್ಷಣ ವ್ಯವಸ್ಥೆಯ ಗುಣಮಟ್ಟಕ್ಕೆ ಸಾಕಷ್ಟು ಕೊಡುಗೆಯನ್ನು ನೀಡಬಹುದು.

**ಅನಿಲ್** ಅವರು ಪ್ರಸ್ತುತ ಯಾದಗಿರಿಯಲ್ಲಿರುವ ಅಜೀಂ ಪ್ರೇಮ್‌ಜಿ ಶಾಲೆಯ ಪ್ರಾಂಶುಪಾಲರಾಗಿದ್ದಾರೆ. ಅವರು ಕಳೆದ ಐದು ವರ್ಷಗಳಿಂದ ಈ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಗುಣಮಟ್ಟದ ಶಿಕ್ಷಣದ ಅರ್ಥ ಮತ್ತು ಉದ್ದೇಶವನ್ನು ಕುರಿತು ಯೋಚಿಸಲು ಇದು ಅವರಿಗೆ ಅವಕಾಶವನ್ನು ಒದಗಿಸಿದೆ ಎಂದು ಅವರು ಹೇಳುತ್ತಾರೆ. ಎಂ.ಎಸ್ಸಿ. ಮತ್ತು ಬಿ.ಎಡ್., ಪದವಿಗಳನ್ನು ಗಳಿಸಿರುವ ಇವರು ಈ ಹಿಂದೆ ಮುಖ್ಯವಾಗಿ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳೊಂದಿಗೆ ದುಡಿದಿದ್ದಾರೆ. ಅವರನ್ನು anil.angadiki@azimpremjifoundation.org ಇಮೇಲ್ ಐಡಿಯ ಮೂಲಕ ಸಂಪರ್ಕಿಸಬಹುದು.